**ಅ. ದಾ. ಸಂ. ಃ 269 /2010**
**ಪಿ . ಡಬ್ಲ್ಯೂ ಃ 02**

**ದಿನಾಂಕ ಃ 10-07-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- 1 ನೇ ಪ್ರತಿವಾದಿಯ ಪರ ಶ್ರೀ.ಎಂ.ಎನ್ , ವಕೀಲರಿಂದ ಃ-**

1. ನನಗೆ ಈ ದಾವೆಯ ಬಗ್ಗೆ ಮಾಹಿತಿ ಇದೆ. ಈ ದಾವೆಯನ್ನು ಸರ್ವೆ ನಂ.42/1 ಬಿ ಗೆ ಹಾಕಲಾಗಿದೆ. ಈ ದಾವೆಯನ್ನು ವಾದಿಯ ಕುಟುಂಬದ ವಿಚಾರ ಮತ್ತು ಸಾಲವನ್ನು ತೀರಿಸುವ ವಿಚಾರವಾಗಿ ಹಾಕಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯ ಹೆಸರು ರಂಗಪ್ಪ.1 ನೇ ಪ್ರತಿವಾದಿಯ ತಂದೆಯು ಗವಿನಾಗಮಂಗಲದಲ್ಲಿ ವಾಸಿಸುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಅವರ ತಂದೆಯ ಜೊತೆ ಗವಿನಾಗಮಂಗಲದಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯು ಎರಡೂ ಕಡೆಯೂ ಸಹ ವಾಸಿಸುತ್ತಿದ್ದರು ಎಂದು ನುಡಿಯುತ್ತಿದ್ದಾರೆ. 1 ನೇ ಪ್ರತಿವಾದಿಯ ತಂದೆ ಬೆಂಗಳೂರಿನ ಬಿ.ಎಲ್ ಲೇ ಔಟ್ ನಲ್ಲೂ ಸಹ ವಾಸಿಸುತ್ತಿದ್ದರು. 1 ನೇ ಪ್ರತಿವಾದಿಯ ತಂದೆಯ ಬೆಂಗಳೂರಿನ ವಿಳಾಸಕ್ಕೆ ಸಂಬಂಧಿಸಿದಂತೆ ಗುರುತಿನ ಚೀಟಿಗಳು ಇತ್ತಾ ಎಂದರೆ ಅದರ ಬಗ್ಗೆ ನನಗೆ ಅಷ್ಟಾಗಿ ಮಾಹಿತಿ ಇಲ್ಲ. ನನಗೆ ಬಿ.ಎಲ್ ಲೇ ಔಟ್‌ನ ಅಕ್ಕಪಕ್ಕದಲ್ಲಿ ಯಾವುದೇ ಮನೆ ಇರುವುದಿಲ್ಲ. ನಾಗರಬಾವಿಯಿಂದ ಬಿ.ಎಲ್ ಲೇ ಔಟ್‌ಗೆ 3 ಕಿ.ಮೀ. ನಷ್ಟು ಅಂತರವಿದೆ. 1 ನೇ ಪ್ರತಿವಾದಿಯ ತಂದೆ ಬೆಂಗಳೂರಿನಲ್ಲಿ ಯಾವ ಯಾವ ಸಮಯದಲ್ಲಿ ಖುದ್ದಾಗಿ ಇದ್ದರು ಎಂದರೆ ಅವರು ಅಲ್ಲಿಯೇ ಇದ್ದರು. 1 ನೇ ಪ್ರತಿವಾದಿಯ ತಂದೆಯು ಆ ವರ್ಷದಲ್ಲಿ ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು ಎಂದರೆ ನನಗೆ ವರ್ಷ ನೆನಪಿಲ್ಲ, ಆದರೆ ಅವರ ಸಾಯುವ ಮೊದಲು ಬೆಂಗಳೂರಿನಲ್ಲಿ ವಾಸಿಸುತ್ತಿದ್ದರು. 1 ನೇ ಪ್ರತಿವಾದಿಯ

ತಂದೆ ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆಂದು ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯ ತಂದೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

2. ನಾನು 1993 ನೇ ಇಸವಿಯಿಂದ ಬೆಂಗಳೂರಿನಲ್ಲಿ ವಾಸಿಸುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಗಲಳ ನಡುವೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ವಿಭಾಗವಾಗಿರುತ್ತದೆ, ಆ ಸಮಯದಲ್ಲಿ ದಾವಾ ಆಸ್ತಿಯು 1 ನೇ ಪ್ರತಿವಾದಿಯವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಲವನ್ನು ತೀರಿಸುವ ಸಲುವಾಗಿ ಅವರ ಭಾಗಕ್ಕೆ ಹೋಗಿರುತ್ತದೆ . 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಮತ್ತು ದಾವಾ ಆಸ್ತಿಯ ಸ್ವಾಧೀನವನ್ನು 2 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ತಂದೆಯು ಗವಿನಾಗಮಂಗಲದಲ್ಲಿ ವಾಸಿಸುತ್ತಿದ್ದರು, ಆದ ಕಾರಣ ಆಧಾರ್ ಕಾರ್ಡ್ ? ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿ ಗವಿನಾಗಮಂಗಲದ ವಿಳಾಸದಲ್ಲಿ ಇತ್ತು ಎಂದರೆ ಇರಬಹುದು. 1 ನೇ ಪ್ರತಿವಾದಿಯ ತಂದೆ ಎಂದಿಗೂ ಸಹ ಬೆಂಗಳೂರಿನ ಬಿ.ಎಲ್ ಲೇ ಔಟ್ ನಲ್ಲಿ ವಾಸ ಮಾಡಿಲ್ಲ ಎಂದರೆ ಸರಿಯಲ್ಲ.

3. ವಾದಿಯು ಮತ್ತು ನಾನು ಸ್ನೇಹಿತರು ಎಂದರೆ ವಾದಿಯು ಮತ್ತು 1 ನೇ ಪ್ರತಿವಾದಿಯು ನನಗೆ ಬಾವಮೈದುನಾ ಆಗುತ್ತಾರೆ. ನಾನು ಮತ್ತು ವಾದಿಯು ಚನ್ನಾಗಿರುವ ಕಾರಣ ವಾದಿಯ ಮಾತನ್ನು ಕೇಳಿಕೊಂಡು ನಾನು 1 ನೇ ಪ್ರತಿವಾದಿಯ ತಂದೆ ಬಿ.ಎಲ್ ಲೇ ಔಟ್ ನಲ್ಲಿ ವಾಸಿಸುತ್ತಿದ್ದರು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**